ಈ) ಹೌದು.

ಉ) ಇಲ್ಲ. ಕಾಮಗಾರಿಯ ಗುಣ ಮಟ್ಟ ಸರಿಯಾಗಿಲ್ಲವೆಂಬ ದೂರಿನ ಮೇರೆಗೆ, 1994ರಲ್ಲಿ ಪ್ರಸಿದ್ಧ ಸ್ಟ್ರಕ್ಚರಲ್ ಇಂಜಿನಿಯರ್ ಮತ್ತು ನಾನ್ ಡಿಸ್ಟ್ರಕ್ಟೀವ್ ಟೆಸ್ಟ್ ಎಕ್ವಿಪ್‌ಮೆಂಟ್ ಹೊಂದಿರುವ ಮೆ. ಟಾರ್ ಸ್ಟೀಲ್ ರಿಸರ್ಚ್ ಫೌಂಡೇಶನ್ ಇನ್ ಇಂಡಿಯ (ಟಿ.ಆರ್.ಎಫ್.ಐ) ರವರಿಂದ ವಿವರವಾದ ಪರೀಕ್ಷೆಗಳನ್ನು ಮಾಡಲಾಯಿತು. ಸದರಿ ಫರ್ಮ್‌ರವರು ಬೋರ್ಡ್ ಸ್ಯಾಂಪಲ್ಸ್‌ಗಳನ್ನು ಎಲ್ಲಾ ಸ್ಟ್ರಕ್ಚರಲ್ ಭಾಗಗಳಿಂದ ಪಡೆದು ಕಾಮಗಾರಿಯ ಗುಣಮಟ್ಟ ಮತ್ತು ಭದ್ರತೆಯ ಬಗ್ಗೆ ಪರೀಕ್ಷೆಗಳನ್ನು ನಡೆಸಿದರು. ಈ ಪರೀಕ್ಷೆಗಳ ಫಲಿತಾಂಶಗಳನ್ನು ವಿಶ್ಲೇಷಣೆ ಮಾಡಿದ ನಂತರ ಅವರು ಕಟ್ಟಡವನ್ನು ಉತ್ತಮ ಇಂಜಿನಿಯರಿಂಗ್ ಪದ್ಧತಿಯಲ್ಲಿ ನಿರ್ಮಿಸಿದ್ದು ಕಟ್ಟಡದ ಗುಣ ಮಟ್ಟವು ಉತ್ತಮವಾಗಿದೆ ಎಂದು ಪ್ರಮಾಣಿಸಿದ್ದಾರೆ.

ಬೆಂಗಳೂರು ನಗರಕ್ಕೆ ಕಾವೇರಿ ನಾಲ್ಕನೇ ಹಂತದ ನೀರು ಸರಬರಾಜು ಯೋಜನೆ

29 (61)

ಶ್ರೀ ರಾಮಲಿಂಗಾರೆಡ್ಡಿ (ಜಯನಗರ): ಮಾನ್ಯ ಬೆಂಗಳೂರು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರಕ್ಕೆ ನೀರು ಪೂರೈಸಲು ಕಾವೇರಿ 4ನೇ ಹಂತದ ಮೊದಲ ಘಟ್ಟದ ಯೋಜನೆಯನ್ನು ಪ್ರಾರಂಭಿಸಲಾಗಿದೆಯೇ?

ಆ) ಹಾಗಿದ್ದಲ್ಲಿ ತಗಲುವ ಅಂದಾಜು ವೆಚ್ಚವೆಷ್ಟು?

ಇ) ಇನ್ನೂ ಪ್ರಾರಂಭಿಸದಿದ್ದಲ್ಲಿ ಯಾವಾಗ ಪ್ರಾರಂಭಿಸಲಾಗುವುದು?

ಶ್ರೀ ಅನಂತನಾಗ್ (ಬೆಂಗಳೂರು ನಗರಾಭಿವೃದ್ಧಿ ಸಚಿವರು):

ಅ) ಹೌದು.

ಆ) ಯೋಜನೆಯ ಅಂದಾಜು ವೆಚ್ಚ ರೂ. 1072.00 ಕೋಟಿಗಳು.

ಇ) ಯೋಜನೆಯ ಪ್ರಾರಂಭಿಕ ಕೆಲಸಗಳಾದ ವಿನ್ಯಾಸ, ಟೆಂಡರ್ ಸಿದ್ಧಪಡಿಸುವ ಕಾರ್ಯಗಳು 15.1.97 ರಿಂದ ಪ್ರಾರಂಭವಾಗಿದೆ.

ಚಾಮರಾಜ ವಿಧಾನ ಸಭಾ ಕ್ಷೇತ್ರದಲ್ಲಿ ವಿದ್ಯುತ್ ಟ್ರಾನ್ಸ್‌ಫಾರ್ಮರ್‌ಗಳನ್ನು ಅಳವಡಿಸುವುದು

ಶ್ರೀ ಹೆಚ್.ಎಸ್.ಶಂಕರ್‌ಲಿಂಗೇಗೌಡ (ಚಾಮರಾಜ): ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಾಮರಾಜ ವಿಧಾನಸಭಾ ಕ್ಷೇತ್ರದಲ್ಲಿ ವಿದ್ಯುತ್ ಸಮಸ್ಯೆ ಇರುವ ಪ್ರದೇಶಗಳು ಯಾವುವು; ಈ ಪ್ರದೇಶಗಳಲ್ಲಿ ವಿದ್ಯುತ್ ಸಮಸ್ಯೆ ಬಗೆ ಹರಿಸಲು ಕೈಗೊಂಡಿರುವ ಕ್ರಮಗಳೇನು?

ಆ) 1995-96, 96-97, 97-98ನೇ ಸಾಲಿನಲ್ಲಿ ವಿದ್ಯುತ್ ಸಮಸ್ಯೆ ಬಗೆಹರಿಸಲು ಎಲ್ಲೆಲ್ಲಿ ಹೊಸದಾಗಿ ಟ್ರಾನ್ಸ್‌ಫಾರ್ಮರ್‌ಗಳನ್ನು ಅಳವಡಿಸಲಾಗಿದೆ; ಇದಕ್ಕೆ ತಗಲಿದ ವೆಚ್ಚ ಎಷ್ಟು? (ವಿವರವಾದ ಮಾಹಿತಿಗಳನ್ನೊದಗಿಸುವುದು)

ಶ್ರೀ ಶರಣಬಸಪ್ಪ ದರ್ಶನಾಪುರ (ಇಂಧನ ರಾಜ್ಯ ಸಚಿವರು):

ಅ) ಚಾಮರಾಜ ವಿಧಾನ ಸಭಾ ಕ್ಷೇತ್ರದ ಈ ಕೆಳಕಂಡ ಪ್ರದೇಶಗಳಲ್ಲಿ ವಿದ್ಯುತ್ ಸಮಸ್ಯೆ ಇದೆ. 1. ಬಿ.ಎಂ.ಶ್ರೀ. ನಗರ 2. ವಿಜಯಶ್ರೀಪುರ 3. ಗೋಕುಲಂ 3ನೇ ಹಂತ 4. ಬೃಂದಾವನ ಬಡಾವಣೆ 5. ವಿ.ವಿ.ಮೊಹಲ್ಲಾ 6. ಜನತಾನಗರ 7. ಮಹದೇಶ್ವರ ಬಡಾವಣೆ 8. ಟಿ.ಕೆ.ಲೇಔಟ್ 4ನೇ ಹಂತ 9. ಮಂಡಿ ಮೊಹಲ್ಲಾ.

ಮೇಲಿನ ಪ್ರದೇಶಗಳಲ್ಲಿನ ವಿದ್ಯುತ್ ಸಮಸ್ಯೆಯ ನಿವಾರಣೆಗಾಗಿ ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ.

1. ಹೊಸ ವಿತರಣಾ ಟ್ರಾನ್ಸ್‌ಫಾರ್ಮರ್‌ಗಳನ್ನು ಸ್ಥಾಪಿಸುವುದು.

2. ಹಾಲಿ ಇರುವ ಕಡಿಮೆ ಸಾಮರ್ಥ್ಯದ ವಿತರಣಾ ಟ್ರಾನ್ಸ್‌ಫಾರ್ಮರ್‌ಗಳನ್ನು ಹೆಚ್ಚಿನ ಸಾಮರ್ಥ್ಯದ ವಿತರಣಾ ಟ್ರಾನ್ಸ್‌ಫಾರ್ಮರ್‌ಗಳ ಮೂಲಕ ಬದಲಾಯಿಸುವುದು.

3. ಹಾಲಿ ಇರುವ ಸಿಂಗಲ್ ಫೇಸ್ 3 ವೈರ್ ವ್ಯವಸ್ಥೆಯನ್ನು 3 ಫೇಸ್ 5 ವೈರ್ ವ್ಯವಸ್ಥೆಗೆ ಮಾರ್ಪಾಟುಗೊಳಿಸುವುದು.

4. ಕಡಿಮೆ ಗಾತ್ರದ ವಿದ್ಯುತ್ ವಾಹಕವನ್ನು ಹೆಚ್ಚಿನ ಗಾತ್ರದ ವಿದ್ಯುತ್ ವಾಹಕದ ಮೂಲಕ ಬದಲಾಯಿಸುವುದು.

ಆ) 1995-96, 96-97, 97-98ನೇ ಸಾಲಿನಲ್ಲಿ ವಿದ್ಯುತ್ ಸಮಸ್ಯೆ ಬಗೆಹರಿಸಲು ಹೊಸದಾಗಿ ಟ್ರಾನ್ಸ್‌ಫಾರ್ಮರ್‌ಗಳನ್ನು ಸ್ಥಾಪಿಸಲಾದ ಸ್ಥಳಗಳು ಮತ್ತು ತಗುಲಿದ ವೆಚ್ಚಗಳ ವಿವರಗಳನ್ನು ಅನುಬಂಧದಲ್ಲಿ ಒದಗಿಸಿದೆ.

ANNEXURE-I

UN-STARRED QUESTION NO.55 TABLED BY SRI H.S.SHANKARALINGE GOWDA, MLA

The places in which new transformers have been provided during the year 1995-96 and the total expenditure incurred.

Sl. No.	Name of the place	No. of Transformers. commissioned	Total Expenditure incurred (Rs. in Lakhs)
1.	Gokulam 3rd stage	1	0.85
2.	Brindavan Layout	2	2.00
3.	V.V.Mohalla	1	1.00
4.	Mahadeshwara Layout	1	1.00
5.	Janathanagara & T.K.Layout	4	6.24
6.	B.M.Srinagara	1	0.80
	TOTAL	10	11.89

The places in which new transformers have been provided during the year 1996-97 and the expenditure incurred.

Sl. No.	Name of the place	No. of Transformers. commissioned	Total Expenditure incurred (Rs. in Lakhs)
1.	B.M.Srinagara	1	1.00
2.	Gokulam 3rd stage	1	0.80

3.	Mahadeshwara Layout	1	0.80
4.	Janathanagar & T.K.Layout	3	2.91
5.	Mandi Mohalla	2	2.00
	TOTAL	8	7.51

The Places in which new transformers have been provided during the year 1997-98 upto end of February 1998 and the expenditure incurred.

Sl. No.	Name of the place	No. of Transformers. commissioned	Total Expenditure incurred (Rs. in Lakhs)
1.	B.M.Srinagara	1	0.80
2.	Gokulam 3rd Stage	1	0.80
3.	Brindavan Layout	1	0.80
4.	Janathanagar & T.K.Layout	3	4.50
5.	Mandi Mohalla	8	13.00
	TOTAL	14	19.90

ಮೈಸೂರು ನಗರದಲ್ಲಿ ವಿದ್ಯುತ್ ಕೊರತೆ ನಿವಾರಣೆ

32 (53)

ಶ್ರೀ ಹೆಚ್.ಎಸ್.ಶಂಕರಲಿಂಗೇಗೌಡ (ಚಾಮರಾಜ): ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?